# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

45

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಆರ್.ಗೋಪಿ ತಂದೆ ರಾಜು | ಶ್ರೀಮತಿ ಸರಸ್ವತಿ ಪಾಟೀಲ್ ಗಂಡ ತಿಪ್ಪನಗೌಡ |

ವಿಷಯ:-ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಕೊಳಗಲ್ಲು ಗ್ರಾಮದ ಸರ್ವೆ ನಂ:429 ಪೈಕಿ ವಿಸ್ತೀರ್ಣ:0.26.00 ಸೇಂಟ್ಸ್ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

*********

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಕೊಳಗಲ್ಲು ಗ್ರಾಮದ ಸರ್ವೆ ನಂ:429 ಪೈಕಿ ವಿಸ್ತೀರ್ಣ:0.26.00 ಸೇಂಟ್ಸ್ ಜಮೀನಿ ಹಾಲಿ ಭೂಮಾಲಿಕರಾದ ಶ್ರೀಮತಿ ಸರಸ್ವತಿ ಪಾಟೀಲ್ ಗಂಡ ತಿಪ್ಪನಗೌಡ ಇವರು ಉಪನೊಂದಾಣಿ ಅಧಿಕಾರಿಗಳು ಬಳ್ಳಾರಿ ಇವರ ಸಂಖ್ಯೆ: BLY-1-09923/2015-16 ದಿನಾಂಕ:06-11-2015ರ ಪ್ರಕಾರ ಶ್ರೀ ಆರ್.ಗೋಪಿ ತಂದೆ ರಾಜು ಇವರಿಗೆ ಖರೀದಿಗೆ ಮಾರಟ ಮಾಡಿರುತ್ತಾರೆ. ಅದರಂತೆ ಖರೀದಿದಾರರು ಹಕ್ಕುಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಶ್ರೀಮತಿ ಸರಸ್ವತಿ ಪಾಟೀಲ್ ಗಂಡ ತಿಪ್ಪನಗೌಡ ಇವರಿಂದ ಹಕ್ಕುಬದಲಾವಣೆ ಮಾಡದಂತೆ ತಕಾರರು ಮನವಿಯನ್ನು ಸಲ್ಲಿಸಿರುತ್ತಾರೆ. ಕಾರಣ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರು ಸದ್ರಿ ಕಡತವನ್ನು ತಿರಸ್ಕರಿಸಿ ಇತ್ಯರ್ಥ ಪಡೆಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ21-03-2016, 23-05-2016, ರಂದು ವಿಚಾರಣೆ ನಡೆಸಲಾಗಿ ವಾದಿಗಳು ಪ್ರಕರಣಕ್ಕೆ ಹಾಜರಾಗಿ. ಪ್ರತಿವಾದಿಗಳು ಹಾಜರಾಗಿ ಹಕ್ಕು ಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಅಪಿಡೆವಿಟ್ ನೀಡಿರುತ್ತಾರೆ ಕಾರಣ ಈ ಕೆಳಗಿನಂತೆ ಆದೇಶ.

**-::ಆದೇಶ::-**

ಸಂ/ಕಂ/ವಿವಾದ/59/2015-16 ದಿನಾಂಕ: 6 /6 /2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಕೊಳಗಲ್ಲು ಗ್ರಾಮದ ಸರ್ವೆ ನಂ:429 ಪೈಕಿ ವಿಸ್ತೀರ್ಣ:0.26.00 ಸೇಂಟ್ಸ್ ಜಮೀನನ್ನು ಉಪನೊಂದಾಣಿ ಅಧಿಕಾರಿಗಳು ಬಳ್ಳಾರಿ ಇವರ ಸಂಖ್ಯೆ: BLY-1-09766/2015-16 ದಿನಾಂಕ:04-11-2016ರ ಪ್ರಕಾರ ಶ್ರೀ ಆರ್.ಗೋಪಿ ತಂದೆ ರಾಜು ಇವರ ಹೆಸರಿಗೆ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 6.6.2016ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ

ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ